ಒಂದು ಒಳ್ಳೆಯ ನೋಟಕ್ಕಾಗಿ, ತಕ್ಕ ಫೋಸಿಗಾಗಿ ಗಂಟೆಗಟ್ಟಲೆ ಉಸಿರು ಬಿಗಿಹಿಡಿದು ರೋಡ್ ರೋಮಿಯೋಗಳ ತರಹ ಕಾಯುತ್ತಿದ್ದೆವು. ಬಹಳಷ್ಟು ಸಲ ಹಕ್ಕಿಗಳ ಬೆನ್ನು ಹತ್ತಿ ಹೋಗುವುದೇ ತಪ್ಪು ಎನ್ನಿಸುವುದುಂಟು. ನಾವು ಹಿಂಬಾಲಿಸುವುದು ನೋಡಿ ಹೆಚ್ಚು ಗಾಬರಿಗೊಂಡು ಹಕ್ಕಿಗಳು ದೂರ ದೂರಕ್ಕೆ ಹೋಗಿ ಬಿಡುತ್ತಿದ್ದವು. ಸುಮ್ಮನೆ ಒಂದು ಕಡೆ ಕೂತು ಕಾಯುತ್ತಿದ್ದರೆ ಅವೇ ಅಚಾನಕ್ಕಾಗಿ ನಮ್ಮ ಕಣ್ಣೆದುರು ಬಂದು ಇಳಿದು ಫೋಸು ಕೊಡುತ್ತಿದ್ದವು. ಕೆಲ ಪಕ್ಷಿಗಳು ನಮ್ಮ ಸಾಮೀಪ್ಯಕ್ಕೆ ಕ್ಯಾರೇ ಎನ್ನುತ್ತಿರಲಿಲ್ಲ. ಅಂತಹವು ನಮಗೆ ಬೇಡವಾದ ಹಕ್ಕಿಗಳಾಗಿದ್ದವು. ನಾವು ಪಟ್ಟು ಹಿಡಿದು ತಲಾಶು ಮಾಡುತ್ತಿದ್ದ ಖಗಗಳು ಒಂದೋ ನಾಚಿಕೆಗೊಂಡು ತೀರಾ ದೂರ ಇದ್ದವು. ಇವುಗಳಲ್ಲಿ ಕೆಲ ಕೆಂಪು ಜುಟ್ಟಿನ ಬಾತು, ಕಂದು ತಲೆ ಹೆಬ್ಬಾತುಗಳು, ಬಿಳಿಯ ಪೆಲಿಕಾನ್, ಜೊತೆ ಕೆಲ ವಿಶೇಷ ಗೂಬೆಗಳು ಸೇರಿದ್ದವು. ಹತ್ತಿರ ಹೋದರೆ ಮುನಿಸಿಕೊಂಡು ಪರಾರಿಯಾಗುತ್ತಿದ್ದ ಪೈಕಿ ಬ್ಲೂ ಥ್ರೋಟೆಡ್, ಬಾರ್ ಹೆಡೆಡ್ ಗೋಸ್ ಎಂಬ ಚಲುವ ಹಕ್ಕಿಗಳು ಸೇರಿದ್ದವು.

ಸಂಜೆ ಮತ್ತು ಬೆಳಗಿನ ಪಟಗಳು ತುಂಬಾ ಚೆನ್ನಾಗಿ ಮೂಡುತ್ತಿದ್ದವು. ಸೂರ್ಯನು ಮುಳುಗುವಾಗ ಅವನ ಗೋಳಾಕಾರದ ಎದುರಾಗಿ ಹಕ್ಕಿಯನ್ನು ಇರಿಸಿಕೊಂಡು ಚಿತ್ರ ತೆಗೆಯುವುದು ಒಂದು ಸಾಹಸದ ಕೆಲಸ. ಕೆಲವೇ ಕ್ಷಣಗಳಲ್ಲಿ ನಮ್ಮ ಪ್ರಯೋಗ ಯಶಸ್ವಿಯಾಗಬೇಕು. ಹೆಚ್ಚು ಸಮಯ ಉಳಿದಿರುವುದಿಲ್ಲ. ಅಷ್ಟು ಹೊತ್ತಿಗೆ ಸರಿಯಾಗಿ ಒಂದು ಕೊಂಬೆಯ ಮೇಲೆ ಹಕ್ಕಿಯೂ ಬಂದು ಕೂರಬೇಕು. ಇದೆಲ್ಲಾ ನಸೀಬಿನ ಕೆಲಸ. ಎರಡು ಮೂರು ದಿನ ಈ ಪ್ರಯೋಗ ಮಾಡಿ ಗೆದ್ದೇ ಬಿಟ್ಟೆವು.

ಮತ್ತೊಂದು ಕಡೆ ಸಾಕಷ್ಟು ನೀರು ನಿಂತಿತ್ತು. ಅಲ್ಲಿ ಮೀನುಗಳು ಫಳಫಳಾರನೆ ನೆಗೆದಾಡುತ್ತಿದ್ದವು. ಇಂತಲ್ಲಿಗೆ ಉದ್ದ ಕೊಕ್ಕಿನ ನೀರು ಕಾಗೆ ಮತ್ತು ಹಾವಕ್ಕಿಗಳು ಬರುವುದು ಸಹಜ. ಹಾವಕ್ಕಿಗಳು ನೀರಿನೊಳಗೆ ಸರಕ್ಕನೆ ಮುಳುಗಿ ಮೀನನ್ನು ಕೊಕ್ಕಿನಿಂದ ಚುಚ್ಚಿ ಎತ್ತಿ ತರುವುದರಲ್ಲಿ ನಿಸ್ಸೀಮ ಶಿಕಾರಿಗಳು. ಹಾಗೆ ಹಿಡಿದು ತರುವ ಮೀನನ್ನು ಗಾಳಿಯಲ್ಲಿ ಹಾರಿಸಿ ಬಾಯಿಗೆ ಬಿಸ್ಕೇಟಿನಂತೆ ಎಸೆದುಕೊಳ್ಳುತ್ತವೆ. ಇವುಗಳ ನೋಟಕ್ಕಾಗಿ ಒಂದು ದಿನ ಮೀಸಲಿಟ್ಟು ಕೆಸರಿನ ಕೊಳದಲ್ಲಿ ಕುಂಡಿ ಊರಿ ಕೂತೆವು. ಎಲ್ಲೋ ಮುಳುಗಿ ಮತ್ತೆಲ್ಲೋ ಪುಸಕ್ಕೆಂದು ಮೇಲೇಳುವ ಇವುಗಳ ಪಟ ತೆಗೆಯುವುದು ಸವಾಲಿನ ಕೆಲಸ. ಅಂದಾಜು ಮಾಡಲಾಗುವುದಿಲ್ಲ. ನಮ್ಮ ಕ್ಯಾಮೆರಾ ಮುಖ ಅದರತ್ತ ತಿರುಗಿಸಿ, ಫೋಕಸ್ ಕೀಲಿಸಿ ಪಟಕ್ಕೆ ಕ್ಲಿಕ್ ಎನ್ನುವಾಗ ಅದರ ಭೋಜನ ಮುಗಿದಿರುತ್ತಿತ್ತು. ಆಗಸಕ್ಕೆ ತನ್ನ ಬೇಟೆಯನ್ನು ಎಸೆದು ಅದೇ ನೇರಕ್ಕೆ ಬಾಯಗಲಿಸಿ ಕ್ಯಾಚು ಹಿಡಿದು ನುಂಗುವ ಇದರ

